**ದಿನಾಂಕ 10.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ: ಶ್ರೀ. ಎಂ.ಎನ್. ವಕೀಲರಿಂದಃ-**

ಸಾಕ್ಷಿಗೆ ಒಂದು ಪಹಣಿ ಪತ್ರಿಕೆಯನ್ನು ತೋರಿಸಿ ಸದರಿ ಪಹಣಿಯು ತನ್ನ ಹೆಸರಿನಲ್ಲಿ ಇರುವುದಾಗಿ ಒಪ್ಪಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರ ಸರ್ವೆ ನಂ.54/2 ರಲ್ಲಿ 02 ಎಕರೆ 38 ಗುಂಟೆ ನನ್ನ ಹೆಸರಿನಲ್ಲಿ ಇದ್ದು ಸದರಿ ಆಸ್ತಿಯು ನನಗೆ ಜುಬಾನೆ ಹಿಸ್ಸೆಯಂತೆ ಬಂದಿರುತ್ತದೆ. ಸಾಕ್ಷಿ ಮುಂದುವರೆದು ನನಗೆ ಜುಬಾನೆ ಹಿಸ್ಸೆಯಲ್ಲಿ ಸರ್ವೆ ನಂ.54/2 ರಲ್ಲಿ 03 ಎಕರೆ 30 ಗುಂಟೆ ಬರಬೇಕಾಗಿತ್ತು, ಆದರೆ ನನಗೆ ಕಡಿಮೆ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಡಿ.1 ರ ದಾಖಲೆಯಲ್ಲಿ ಎಂ.ಆರ್.21/2000-01 ರಂತೆ ವಿಭಾಗದಂತೆ ನನ್ನ ಹೆಸರಿಗೆ ಬಂದಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ 03 ಎಕರೆ 30 ಗುಂಟೆ ಆಸ್ತಿಬರಬೇಕಾಗಿತ್ತು, ಆದರೆ ನನಗೆ ಕಡಿಮೆ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ.

ನನಗೆ ಜುಬಾನೆ ಹಿಸ್ಸೆಯಂತೆ ಸರ್ವೆ ನಂ.54/2 ರಲ್ಲಿ 03 ಎಕರೆ 30 ಗುಂಟೆ ಬರಬೇಕಾಗಿತ್ತು, ಆದರೆ 02 ಎಕರೆ 38 ಗುಂಟೆ ಆಸ್ತಿ ಕಡಿಮೆಯಾಗಿ ಬಂದಿರುತ್ತದೆ ಎಂದು ನಾನು ನನ್ನ ಹೆಸರಿನಲ್ಲಿರುವ ಪಹಣಿ ಮತ್ತು ಎಂ.ಆರ್.ಅನ್ನು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುತ್ತೇನೆ. 2022 ರಲ್ಲಿ ನಾನು ಎ.ಸಿ. ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿರುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ನೋಡಿ ಸಾಕ್ಷಿಯು ಸದರಿ ದಾಖಲಾತಿಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಎ.ಸಿ. ನ್ಯಾಯಾಲಯದಲ್ಲಿ ಪ್ರತಿವಾದಿಯನ್ನು ಎದುರು ಪಕ್ಷಗಾರರನ್ನಾಗಿ ಮಾಡಿರುತ್ತೇನೆ.

ನಾನು, ನನ್ನ ಸಹೋದರನಾದ ಪ್ರತಿವಾದಿ ಹಾಗೂ ನನ್ನ ತಂದೆಯ ಎರಡನೇ ಹೆಂಡತಿಯ ಮಕ್ಕಳಾದ ವಿಜಯ್ ಕುಮಾರ್ ಮತ್ತು ಪ್ರಭಾಕರ್ ರವರು ಸೇರಿ ಎಂ.ಆರ್.21/2000-01 ರಂತೆ ಜುಬಾನೆ ಹಿಸ್ಸೆಯನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2000-01 ರಲ್ಲಿ ನಾವು 04 ಜನರು ಅಣ್ಣ-ತಮ್ಮಂದಿರು ಜುಬಾನೆ ವಿಭಾಗ ಮಾಡಿಕೊಂಡಿದ್ದು, ಆದರೆ ಸದರಿ ಜುಬಾನೆಯಲ್ಲಿ ನನ್ನ ತಾಯಿಗೆ 02

ಎಕರೆ ಆಸ್ತಿಯನ್ನು ಜೀವನಾಂಶಕ್ಕಾಗಿ ಬಿಡಲಾಗಿತ್ತು ಎಂದು ನುಡಿಯುತ್ತಾರೆ. ನಮ್ಮ ಊರಾದ ಬಳ್ಳಿಗನೂರು ಗ್ರಾಮದ ಮುಖ್ಯಸ್ಥರನ್ನು ಸೇರಿಸಿ ಜುಬಾನೆ ಹಿಸ್ಸೆ ಮಾಡಿಕೊಳ್ಳಲಾಗಿತ್ತು. ಸದರಿ ಮುಖ್ಯಸ್ಥರುಗಳೆಂದರೆ ಗಂಗಾಧರಪ್ಪ, ಪಾಪಣ್ಣರವರಾಗಿದ್ದು, ಉಳಿದವರ ಹೆಸರು ನನಗೆ ಈಗ ಮರೆತು ಹೋಗಿರುತ್ತದೆ. ನಮ್ಮ ಗ್ರಾಮದ ಮುಖ್ಯಸ್ಥರ ಮುಂದೆ ಮಾಡಿಕೊಂಡ ಜುಬಾನೆ ಹಿಸ್ಸೆಗೆ ಸಂಬಂಧಿಸಿದಂತೆ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಜುಬಾನೆ ಹಿಸ್ಸೆಗೆ ನಾನು ಮತ್ತು ನನ್ನ 03 ಜನ ಸಹೋದರರು ಸಹಿ ಮಾಡಿರುತ್ತಾರೆ. ಸದರಿ ಜುಬಾನೆ ಹಿಸ್ಸೆಗೆ ಸಂಬಂಧಿಸಿದಂತೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಿಪಿ.1ರ ಪಹಣಿಯು ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಾನು ನನ್ನ ಹೆಸರಿಗೆ ಬಂದ ಆಸ್ತಿಗೆ ಸಂಬಂಧಿಸಿದಂತೆ ತರೀಕೆರೆಯ ಜಯಣ್ಣ ಎಂಬುವವರಿಗೆ ಮಾರಾಟ ಮಾಡಾಲು ಕ್ರಯದ ಒಪ್ಪಂದದ ಕರಾರುಪತ್ರವನ್ನು ಮಾಡಿಕೊಂಡಿದ್ದೆ ಎಂದರೆ ಸರಿ. ಸದರಿ ಕ್ರಯದ ಕರಾರುಪತ್ರವನ್ನು ನಾನು 2017-18ರಲ್ಲಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. 01 ಎಕರೆಗೆ 06 ಲಕ್ಷದಂತೆ ನನ್ನ ಹಿಸ್ಸೆಗೆ ಬಂದ 02 ಎಕರೆ 30ಗುಂಟೆಯನ್ನು ಮಾರಾಟ ಮಾಡಲು ಕ್ರಯದ ಒಪ್ಪಂದದ ಕರಾರುಪತ್ರವನ್ನು ಮಾಡಿಕೊಂಡಿರುತ್ತೇನೆ. ಆ ಸಮಯದಲ್ಲಿ ನನ್ನ ಹೆಸರಿಗೆ 02 ಎಕರೆ 30 ಗುಂಟೆ ಆಸ್ತಿ ಬಂದಿತ್ತು ಎಂದರೆ ಸರಿ. ನನ್ನ ಹೆಸರಿಗೆ 02 ಎಕರೆ 30 ಗುಂಟೆ ಆಸ್ತಿ ಬಂದಿದ್ದ ಆಧಾರದ ಮೇರೆಗೆ ಕ್ರಯದ ಕರಾರುಪತ್ರವನ್ನು ಮಾಡಿಕೊಟ್ಟಿದ್ದೆ ಎಂದರೆ ಸರಿ. ಆ ಸಮಯದಲ್ಲಿ ನನಗೆ 02 ಎಕರೆ 30 ಗುಂಟೆ ಆಸ್ತಿ ಬಂದಿರುತ್ತದೆ ಎಂದು ತಿಳಿದಿದ್ದು, ನನ್ನ ತಮ್ಮನಿಗೆ 04 ಎಕರೆ 29 ಗುಂಟೆ ಆಸ್ತಿ ಬಂದಿರುತ್ತದೆ ಎಂದು ಆಗ ನನ್ನ ಗಮನಕ್ಕೆ ಬಂದಿರುತ್ತದೆ. ಸಾಕ್ಷಿ ಮುಂದುವರೆದು ಆಗ ನನ್ನ ತಮ್ಮನನ್ನು ಕೇಳಿದಾಗ ಆತ ಬಂದು ಬರೆದುಕೊಡುವುದಾಗಿ ನನಗೆ ತಿಳಿಸಿದ್ದನು ಎಂದು ನುಡಿಯುತ್ತಾರೆ.

ನನ್ನ ವಿವಾಹವು 1987ರಲ್ಲಿ ಆಗಿರುತ್ತದೆ. ನಾನು ಅಂತರ್ಜಾತಿಯ ವಿವಾಹ ಮಾಡಿಕೊಂಡಿರುವುದಿಲ್ಲ. ನನ್ನ ವಿವಾಹವನ್ನು ಶಾಸ್ತ್ರಬದ್ಧವಾಗಿ ನನ್ನ ಮನೆಯವರು ನೋಡಿ ಮಾಡಿರುತ್ತಾರೆ. ನಾವು ವಾಲ್ಮೀಕಿ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನನ್ನ ಹೆಂಡತಿಯೂ ಸಹ ವಾಲ್ಮೀಕಿ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ನನ್ನ ಹೆಂಡತಿ ಮೂಲತಃ

ಬೆಂಗಳೂರಿನವರಾಗಿರುತ್ತಾರೆ ಎಂದರೆ ಸರಿ. ನಾನು ಅಂತರ್ಜಾತಿ ವಿವಾಹವಾಗಿರುವುದು ನನ್ನ ಕುಟುಂಬಕ್ಕೆ ಇಷ್ಟವಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯೊಂದಿಗೆ ನಾನು ಬಳ್ಳಿಗನೂರು ಗ್ರಾಮಕ್ಕೆ ಕರೆದುಕೊಂಡು ಬಂದು ಸಂಸಾರ ನಡೆಸಿರುತ್ತೇನೆ. ನಾನು ಅಂತರ್ಜಾತಿಯ ವಿವಾಹವಾಗಿರುವುದರಿಂದ ನನ್ನ ಹೆಂಡತಿ ಬಳ್ಳಿಗನೂರು ಗ್ರಾಮಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡಾಗ ನನ್ನ ಹೆಂಡತಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಹೆಂಡತಿ ಎಂದಿಗೂ ನನ್ನ ತಂದೆ-ತಾಯಿ ಯೋಗಕ್ಷೇಮವನ್ನಾಗಲಿ, ನನ್ನ ಸಹೋದರರ ಯೋಗಕ್ಷೇಮವನ್ನಾಗಲಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆ-ತಾಯಿಯ ಮತ್ತು ನನ್ನ ಸಹೋದರರ ಯೋಗಕ್ಷೇಮವನ್ನುನಾನು ನೋಡದೇ ಇರುವುದರಿಂದ ನನ್ನ ಸಹೋದರನಾದ ಪ್ರತಿವಾದಿಯು ನನ್ನ ತಂದೆ-ತಾಯಿಯ ಯೋಗಕ್ಷೇಮವನ್ನು ಮತ್ತು ಇನ್ನುಳಿದ ಸಹೋದರರ ಯೋಗಕ್ಷೇಮವನ್ನು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2000-01ರ ಜುಬಾನೆ ಹಿಸ್ಸೆಯಲ್ಲಿ ಊರಿನ ಪಂಚಾಯಿತಿದಾರರು ನನ್ನ ತಂದೆ-ತಾಯಿಯ ಯೋಗಕ್ಷೇಮವನ್ನು ನನ್ನ ಸಹೋದರನಾದ ಪ್ರತಿವಾದಿಯು ನೋಡಿಕೊಳ್ಳುತ್ತಿರುವುದರಿಂದ ಆತನಿಗೆ 02 ಎಕರೆ ಹೆಚ್ಚುವರಿಯಾಗಿ ಅಂದರೆ 04 ಎಕರೆ 29 ಗುಂಟೆ ಆಸ್ತಿಯನ್ನು ಆತನ ಹಿಸ್ಸೆಗೆ ನೀಡಿ ನನ್ನ ಹಿಸ್ಸೆಗೆ 02 ಎಕರೆ 30 ಗುಂಟೆ ಆಸ್ತಿಯನ್ನು ನೀಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಜುಬಾನೆ ಹಿಸ್ಸೆಯು ನೊಂದಣಿಯಾಗಿರುವುದಿಲ್ಲ ಎಂದರೆ ಸರಿ. ನಾನು ತರೀಕೆರೆಯ ಜಯಣ್ಣನವರಿಗೆ ಕ್ರಯ ಕರಾರು ಪತ್ರ ಮಾಡಿಕೊಟ್ಟ ದಿನಕ್ಕಿಂತ ಈಗ ಸದರಿ ಆಸ್ತಿಗೆ ಹೆಚ್ಚು ಬೆಲೆ ಇರುತ್ತದೆ ಎಂದರೆ ಸರಿ. ನಾನು ನನ್ನ ತಂದೆ-ತಾಯಿ ಮತ್ತು ಸಹೋದರರ ಯೋಗಕ್ಷೇಮವನ್ನು ನೋಡಿಕೊಂಡಿರುವ ಬಗ್ಗೆ ನನ್ನ ಬಳಿ ದಾಖಲಾತಿ ಇರುತ್ತದೆ. ಸದರಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳು ಪ್ರತಿವಾದಿಗೆ ನೀಡಿರುವ 04 ಎಕರೆ 29 ಗುಂಟೆ ಆಸ್ತಿಗೆ ಸಂಬಂಧಿಸಿದಂತೆ ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.54ರಲ್ಲಿ ಒಟ್ಟು 13 ಎಕರೆ 20 ಗುಂಟೆ ಆಸ್ತಿ ಇದ್ದು, ಸದರಿ ಆಸ್ತಿಯು ಯಾರ-ಯಾರ ಹೆಸರಿಗೆ ಎಷ್ಟು-ಎಷ್ಟು ಹೋಗಿರುತ್ತದೆ ಎಂದು ನಾನು

ತಿಳಿದುಕೊಂಡಿರುತ್ತೇನೆ. 13 ಎಕರೆ 20 ಗುಂಟೆ ಪೈಕಿ ನನಗೆ 02 ಎಕರೆ 30 ಗುಂಟೆ, ಪ್ರತಿವಾದಿಗೆ 04 ಎಕರೆ 29 ಗುಂಟೆ, ನನ್ನ ಇತರೆ ಸಹೋದರರಾದ ವಿಜಯ್ ಕುಮಾರ್ ರವರಿಗೆ 02 ಎಕರೆ 30 ಗುಂಟೆ, ಪ್ರಭಾಕರ್ ರವರಿಗೆ 02 ಎಕರೆ 30 ಗುಂಟೆ ಬಂದಿರುತ್ತದೆ. ನನ್ನ ತಂದೆ-ತಾಯಿಯರನ್ನು ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳು ಸರಿಯಾಗಿ ನೋಡಿಕೊಂಡಿರುವುದಿಲ್ಲ ಎಂದರೆ ಸರಿ.ಸರಿಯಾಗಿ ನೋಡಿಕೊಂಡಿದ್ದರೆ ಈ ರೀತಿ ವಿಭಾಗ ಮಾಡುತ್ತಿರಲಿಲ್ಲ ಎಂದರೆ, ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

2000-01 ರಲ್ಲಿ ಜುಬಾನಿ ಹಿಸ್ಸೆ ಮಾಡಿಕೊಂಡಾಗ ನನ್ನ ತಾಯಿ ಬದುಕಿದ್ದರು ಎಂದರೆ ಸರಿ. ನನ್ನ ತಾಯಿ ಇತ್ತೀಚೆಗೆ ಅಂದರೆ 2017-18 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿಯ ಮರಣ ನಂತರದ ಕರ್ಮ-ಕ್ರಿಯಾದಿಗಳನ್ನು ಪ್ರತಿವಾದಿಯು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸಹ ಭಾಗಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ರೂ.80,000/- ಹಣವನ್ನು ನನ್ನ ತಾಯಿಯ ಕರ್ಮ-ಕ್ರಿಯಾದಿಗಳನ್ನು ಮಾಡಲು ಪ್ರತಿವಾದಿಗೆ ನೀಡಿರುತ್ತೇನೆ. ನಾನು ಪ್ರತಿವಾದಿಗೆ ರೂ.80,000/- ನೀಡಿರುವ ಬಗ್ಗೆ ನನ್ನ ಬಳಿ ದಾಖಲಾತಿ ಇರುವುದಿಲ್ಲ. ನಾನು ರೂ.80,000/- ಹಣವನ್ನು ಪ್ರತಿವಾದಿಗೆ ನೀಡದೇ ಇದ್ದುದ್ದರಿಂದಲೇ ನನ್ನ ಬಳಿ ದಾಖಲಾತಿ ಇರುವುದಿಲ್ಲ, ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ನಂತರ ಕರ್ಮ-ಕ್ರಿಯಾದಿಗಳನ್ನು ಪ್ರತಿವಾದಿಯು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಹ ಅದಕ್ಕೆ ಸಮನಾಗಿ ಭಾಗಿಯಾಗಿರುತ್ತೇನೆ. ನನ್ನ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಈಗ ಮರೆತು ಹೋಗಿರುತ್ತದೆ. ನನ್ನ ತಂದೆಯ ಕರ್ಮ-ಕ್ರಿಯಾದಿಗಳಿಗೆ ನಾನು ಎಂದಿಗೂ ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಕರ್ಮ-ಕ್ರಿಯಾದಿಗಳಿಗೆ ಭಾಗಿಯಾಗಿರುವ ಬಗ್ಗೆ ನನ್ನ ಬಳಿ ದಾಖಲಾತಿಗಳು ಇರುವುದಿಲ್ಲ. ನನ್ನ ತಂದೆ-ತಾಯಿ ಬದುಕಿದ್ದಾಗಲೂ ಸಹ ಅವರ ಯೋಗಕ್ಷೇಮಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳು ಇರುತ್ತವೆ.

ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳು ಅವರ ಹಿಸ್ಸೆಗೆ ಬಂದ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ನನ್ನ ಗಮನಕ್ಕಾಗಲಿ, ಪ್ರತಿವಾದಿಯ ಗಮನಕ್ಕಾಗಲಿ

ತಂದಿರುವುದಿಲ್ಲ ಎಂದರೆ ಸರಿ. ನಾನು ತರೀಕೆರೆಯ ಜಯಣ್ಣನವರಿಗೆ ನನ್ನ ಹಿಸ್ಸೆಯ ಜಮೀನನ್ನು ಮಾರಾಟ ಮಾಡಲು ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ಪ್ರತಿವಾದಿಗೆ ಮತ್ತು ಇತರ ಸಹೋದರರಿಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳು ಅವರ ಹಿಸ್ಸೆಗೆ ಬಂದು ಆಸ್ತಿಯನ್ನು ಮಾರಾಟ ಮಾಡುವ ಮೊದಲು ನನಗೆ ಏಕೆ ವಿಷಯ ತಿಳಿಸಿರುವುದಿಲ್ಲ ಎಂದರೆ ಜುಬಾನಿ ಹಿಸ್ಸೆಯಂತೆ ಅವರ–ಅವರ ಹೆಸರಿಗೆ ಖಾತೆ ಇದ್ದುದ್ದರಿಂದ ಅವರ–ಅವರ ಹಿಸ್ಸೆಗೆ ಬಂದ ಆಸ್ತಿಯನ್ನು ಮಾರಾಟ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳು ಈವರೆಗು ಸದರಿ ಜುಬಾನಿ ಹಿಸ್ಸೆಯನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಜುಬಾನಿ ಹಿಸ್ಸೆ ಇರುವುದಾರಿಂದಲೇ ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನಾನು 1993 ರಲ್ಲಿ ಬೆಂಗಳೂರಿನಲ್ಲಿ ರೈಲ್ವೆ ಪೊಲೀಸ್ ಪೇದೆಯಾಗಿ ಮೊದಲು ಕೆಲಸಕ್ಕೆ ಸೇರಿರುತ್ತೇನೆ. ಆ ಸಮಯದಲ್ಲಿ ಮನೆಯ ಜವಬ್ದಾರಿಯನ್ನು ನನ್ನ ತಂದೆ–ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.